**ಸಾಕ್ಷಿಯನ್ನು ದಿಃ18.07.2019 ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ** ಶ್ರೀ. P.N.S.ವಕೀಲರಿಂದ

ಮಹಾದೇವ ಕಂಬಾರ ಇದ್ದು ಶ್ರೀದೇವಿ ವಿಧವೆ ಇದ್ದಳು ಎಂದರೆ ಸರಿ. ಮಹಾದೇವ ಮತ್ತು ಶ್ರೀದೇವಿರವರಿಗೆ ಅಡಮಾನ ಪತ್ರ ಮಾಡಿಕೊಡಲು ಏನು ಕಾರಣ ಇತ್ತು ನನಗೆ ಗೊತ್ತಿಲ್ಲ. ಆ ಹಣ ಬಡ್ಡಿಯಿಂದ ತೆಗೆದುಕೊಳ್ಳಲಾಗಿತ್ತೋ? ಅಥವಾ ಇಲ್ಲೋ? ಎಂದರೆ ನನಗೆ ಗೊತ್ತಿಲ್ಲ. ಮಹಾದೇವ ಮತ್ತು ಶ್ರೀದೇವಿರವರು ಪಾಂಡುರಂಗರವರಿಗೆ ಸಂಬಂಧಿಕರು ಅಲ್ಲ ಮತ್ತುಜಾತಿಯವರು ಅಲ್ಲ ಎಂದರೆ ಸರಿ. ಈಗ ನೋಡುತ್ತಿರುವ ದೃಢಿಕೃತ ನಕಲಿನಲ್ಲಿ ಕಂಡುಬರುವ ಪೋಟೊ ನನ್ನ ಅತ್ತಿಗೆ ಲತಿಕಾರವರದ್ದು ಆಗಿರುತ್ತದೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಲತಿಕಾರವರು ಪಾಂಡುರಂಗರವರ ಹೆಂಡತಿ ಇದ್ದು ಈಗ ವಿಧವೆ ಎಂದರೆ ಸರಿ. ಲತಿಕಾರವರ ಮೇಲೆ ನಾನು ದಾವೆ ಮಾಡಿದ್ದೇನೆ ಎಂದರೆ ಸರಿ.

ನಾನು ಈಗ ನನಗೆ ನೀಡಿರುವ ನಿಡಿ-1 ನ್ನು ಓದಿ ನೋಡಿದಾಗ ಶ್ರಿದೇವಿರವವರಿಗೆ 3 ಲಕ್ಷ ರೂ.ಹಣ ಲತಿಕಾ ವಾಪಸ್ಸು ನೀಡಿ ಅಡಮಾನ ಪತ್ರವನ್ನು ರಿಡಮಷೇನ ಮಾಡಿಕೊಟ್ಟಿರುತ್ತಾರೆ ಎಂದು ಬರೆಯಲಾಗಿದೆ. ಆದರೆ ಆ ದಾಖಲೆಯನ್ನು ಯಾವಾಗ ಮಾಡಿಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ. ನಿಡಿ-1 ನ್ನು ನಾನು ದಾವೆ ಹಾಕಿದ 2 ತಿಂಗಳ ನಂತರ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ರ ಪ್ರಕಾರ ಲತಿಕಾರವರ ಗಂಡನ ಸಾಲವನ್ನು ರಿಡಮಷೇನ ಮಾಡಲಾದಗಿದೆ ಎಂದು ಆ ದಾಖಲೆ ಹೇಳುತ್ತದೆ ಎಂದರೆ ಸರಿ. ಗಂಡ ಅಥವಾ ಅಣ್ಣ ಸಾಲ ಮಾಡಿದ್ದಲ್ಲಿ ಆಸ್ತಿಯಲ್ಲಿ ಪಾಲು ಕೇಳಬೇಕಾದಲ್ಲಿ ಅದನ್ನು ತೀರಿಸುವ ಜವಾಬ್ದಾರಿ ಮತ್ತು ಕರ್ತ್ಯವ್ಯ ನನ್ನ ಮತ್ತು ಲತಿಕಾ ಮೇಲೆ ಇರುತ್ತದೆಯೇ ಎಂದರೆ ನನ್ನನ್ನು ಕೇಳಿ ಸಾಲ ಮಾಡಿದ್ದರೆ ನಾನು ಜವಾಬ್ದಾರಳಾಗುತ್ತಿದ್ದೇ ಎಂದು ಸಾಕ್ಷಿ ಹೇಳುತ್ತಾರೆ. ನಿಡಿ-1 ರಲ್ಲಿರುವ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿದ್ದರಿಂದ ಪಾಂಡುರಂಗರಾವರು ಮ್ಯಾನೇಜರ ನಾತೆಯಿಂದ ಮಾಡಿರುವ ಅಡಮಾನ ಸಾಲ ನನ್ನ ಮೇಲೂ ಕೂಡಾ ಬಂಧನಕಾರಿ ಎಂದರೆ ನನ್ನನ್ನು ಕೇಳಿ ಮಾಡಿಲ್ಲ ಆದ್ದರಿಂದ ನಾನು ಜವಾಬ್ದಾರರಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಮಹಾದೇವನ ಸಾಲವನ್ನು ನೀವು ಮುಳುಗಿಸುವ ಇರಾದೆ ಹೊಂದಿದ್ದಿರಾ ಎಂದರೆ ಯಾರು ಸಾಲ ಮಾಡಿದ್ದಾರೆ ಅವರನ್ನು ಕೇಳಬೇಕು ಎಂದು ಸಾಕ್ಷಿ ಹೇಳುತ್ತಾರೆ. ಶ್ರೀದೇವಿ ಸಾಲ ವಾಪಸ್ಸು ಕೊಡದೇ ಇದ್ದುದಕ್ಕೆ ಊರಲ್ಲಿ ಮೊರ್ಚಾ ಮಾಡಿದ್ದರಿಂದ ಜಬರದಸ್ತಿಯಿಂದ ಲತಿಕಾರವರವರಿಂದ ಶ್ರೀದೇವಿಗೆ ಸಾಲ ಮರು ಪಾವತಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಮಾಡಿರುವ ದಾವಾದಲ್ಲಿ ಲತೀಕಾರವವರಿಗೆ ಸಮನ್ಸ ಮುಟ್ಟಿದೆ ಎಂದರೆ ನನಗೆ ಗೊತ್ತಿಲ್ಲ.

ನಿಡಿ-1 ರಲ್ಲಿ ಲತೀಕಾರವರು ತನ್ನ ಗಂಡನ ಆಸ್ತಿಯ ಮೇಲೆ ಮಾಡಿರುವ ಸಾಲವನ್ನು ವಾಪಸ್ಸು ಮಾಡಿ ಅಡಮಾನ ರಿಡಮಷೇನ ಮಾಡುತ್ತಿದ್ದೇನೆ ಎಂದು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಮಾಡಿದ್ದರಿಂದ ಮತ್ತು ವಾದಿ ಇರುವುದರಿಂದ ನಾನು ರಿಡಮಷೇನ ಮಾಡಲು ಬರುವುದಿಲ್ಲವಾದ್ದರಿಂದ

ಲತಿಕಾರವನ್ನು ಮುಂದೆ ಮಾಡಿ ಅಡಮಾನ ಹಣ ನೀಡಿ ರೀಡಮಷೇನ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಸಾಯಬಣ್ಣಾ ಪೋಲಿಸ್ ಪಾಟೀಲ, ಶಾಂತಪ್ಪಾ ಅಣಕಲ, ನಾರಾಯಣ ರೆಡ್ಡಿ ಮತ್ತು ಮಹಾದೇವ ವಾಡಿ ರವರು ನನಗೆ ಗೊತ್ತಿರುತ್ತಾರೆ. ಇವರೆಲ್ಲರೂ ಲತಿಕಾರವರ ಪರವಾಗಿ ಇರುತ್ತಾರೆ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. 3 ಲಕ್ಷ ನೀಡಿ ಅಡಮಾನ ರಿಡಮಷೇನ ಮಾಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಲತಿಕಾರವರು 3 ಲಕ್ಷ ರೂ. ನೀಡಿ ಅಡಮಾನ ರಿಡಮಷೇನ ಮಾಡಿಕೊಂಡಿದ್ದಕ್ಕೆ ನಿಮ್ಮದೇನು ತಕರಾರು ಇದೆ ಎಂದರೆ ನನಗೆ ಈ ವಿಷಯ ಗೊತ್ತಿಲ್ಲವಾದ್ದರಿಂದ ತಕರಾರು ಮಾಡುವ ಪ್ರಶ್ನೆ ಬರುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಲತಿಕಾರವರು 3 ಲಕ್ಷ ರೂ. ನೀಡಿ ಅಡಮಾನ ರಿಡಮಷೇನ ಮಾಡಿರುವ ವಿಚಾರ ನನಗೆ ಈಗ ಗೊತ್ತಾಗಿ ಅಸಂತೋಷ ಆಗಿರುತ್ತದೆ.

ಮೆಹಬುಬರವರಿಗೆ ಜಮೀನು ಮಾರಾಟ ಮಾಡುವ ವಿಚಾರವನ್ನು ನಾನು ವಾದ ಪಪಿತ್ರದಲ್ಲಿ ಹೇಳಿದ್ದು ಅದನ್ನು ಪಾಂಡುರಂಗರಾವರು ಅಥವಾ ಹಣಮಂತರಾವ ಮಾರಾಟ ಮಾಡಿದ್ದಾರೆ ಎಂಬ ಪ್ರಶ್ನೆಗೆ ಪಾಂಡುರಂಗರಾಮ ಮಾರಾಟ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಮೆಹಬೂಬರವರಿಗೆ ಸರ್ವೇ ನಂ.8 ಅಥವಾ 131 ಅಧ,ವಾ ಬೇರೆ ಯಾವ ಜಮೀನು ಮಾರಾಟ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸರ್ವೇ ನಂ.7 ರ ಮಾರಾಟ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಮೆಹಬೂಬರವರಿಗೆ ಪಾಂಡುರಂಗರಾವವರು 14 ಎಕರೆ 10 ಗುಂಟೆ ಜಮೀನು ಮಾರಾಟ ಮಾಡಿದ್ದಾರೆ. ಆ ಜಮೀನನ್ನು 17 ಲಕ್ಷ 39 ಸಾವಿರ ರೂ. ಮಾರಾಟ ಮಾಡಿರುತ್ತಾರೆ. ಪಾಂಡುರಂಗರಾವರು ಕ್ರಿಕೇಟ ಪಂಧ್ಯಗಳಲ್ಲಿ ಗುಲಬರ್ಗಾದಲ್ಲಿ ಅಂಪೈರ ಆಗಿ ಕೆಲಸ ಮಾಡುತ್ತಿದ್ದರು. ದಿಃ 17.01.2016 ರಂದು ಅವರು ಅಚಾನಕ ಆಗಿ ತೀರಿಕೊಂಡರು ಎಂದರೆ ಅವರು ಕ್ಯಾನ್ಸರನಿಂದ ತೀರಿಕೊಂಡರು ಎಂದು ಸಾಕ್ಷಿ ಹೇಳುತ್ತಾರೆ. ಅವರು ಸಾಯುವರೆಗೆ ಮಾತನಾಡುತ್ತಿದ್ದರು ಮತ್ತು ಬುದ್ಧಿ ಸರಿಯಾಗಿತ್ತು ಎಂದರೆ ಅವರಿಗೆ ಗಂಟಲು ಕ್ಯಾನ್ಸರ ಆಗಿದ್ದರಿಂದ ಮಾತನಾಡಲು ಬರುತ್ತಿರಲಿಲ್ಲ ಆದರೆ ಬುದ್ಧಿ ಸರಿಯಿತು. ದಿಃ 17.01.2015 ರಂದು ಪಾಂಡುರಂರಾವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಕ್ಯಾನ್ಸರ ರೋಗ ಪತ್ತೆಯಾಯಿತು.

ಪಾಂಡುರಂಗರಾವರು ಜಾಣನಾಗಿದ್ದರಿಂದ ಅವರಿಗೆ ನಾವು ಅಕ್ಕ-ತಂಗಿಯರಾಗಲಿ ಹೆಂಡತಿಯಾಗಲಿ ಮತ್ತು ಹೊರಗಿನರವರಾಗಲಿಲ ಮೋಸ ಮಾಡುವ ಸಾಧ್ಯತೆ ಇರಲಿಲ್ಲ ಎಂದರೆ ನಾವು ಅಕ್ಕ-ತಂಗಿಯರು ಮತ್ತು ಹೆಂಡತಿ ಮೋಸ ಮಾಡುವ ಸಾಧ್ಯತೆ ಇಲ್ಲ ಆದರೆ ಹೊರಗಿನರವರು ಮಾಡಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಈಗ ತೋರಿಸುತ್ತಿರುವ ನೋಂದಾಯಿತ ಪತ್ರದಲ್ಲಿ ಕಂಡುಬರುವ ಪೋಟೋದಲ್ಲಿರುವ ವ್ಯಕ್ತಿ ನನ್ನ ಅಣ್ಣ ಪಾಂಡುರಂಗರವರು ಇರುತ್ತಾರೆ. ಸದರಿ ದಾಖಲೆ ನಿಡಿ-2 ಎಂದು ಗುರುತಿಸಲಾಯಿತು. ನನಗೆ ಅಡಿವೆಪ್ಪಾ ಬೀಳಗಿ ಮತ್ತು ಗುರುರಾಜ ಕುಲಕರ್ಣಿರವರ ಪರಿಚಯವಿಲ್ಲ. ಪಾಂಡುರಂಗರಾವರಿಗೆ ಇಂಗ್ಲೀಷ

ಭಾಷೆಯ ಮೇಲೆ ಪ್ರಭುತ್ವ ಇತ್ತು ಎಂದರೆ ಸರಿಯಲ್ಲ. ಮೆಹಬೂಬ ಅಶಿಕ್ಷತ ಎಂದರೆ ಸರಿ. ಮುಂದುವರೆದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಸಹೋದರ ತೀರಿಕೊಂಡಾಗ ಪಹಣಿಗಳನ್ನು ತಂದು ನೋಡಿದಾಗ ಮೆಹಬೂಬನ ಹೆಸರು ಪಹಣಿಯಲ್ಲಿ ಇರುವುದು ನನಗೆ ಗೊತ್ತಾಯಿತು. ನಮ್ಮ ಅಣ್ಣ ತೀರಿಕೊಂಡಾಗ ನಾವು ಪಹಣಿಗಳನ್ನು ತಂದು ನೋಡಿದಾಗ ಮಹಾದೇವ ಮತ್ತು ಶ್ರೀದೇವಿಗೆ ಅಡಮಾನ ಪತ್ರ ಮಾಡಿರುವ ವಿಚಾರ ನನಗೆ ಗೊತ್ತಾಯಿತು. ಕರ್ನಾಟಕ ರಾಜ್ಯದಲ್ಲಿ  ಕಳೆದ 10 ವರ್ಷಗಳಿಂದ ನೀರಾವರಿಗೆ ಬಳಸುವ ವಿದ್ಯುತ್ ಸರಬರಾಜು ಉಚಿತವಾಗಿದೆ ಎಂದರೆ ಸರಿ. ಮೆಹಬೂಬ ಖರೀದಿ ಮಾಡಿದ ಜಮೀನಿನಲ್ಲಿ IP Set ಇದೆ ಎಂದರೆ ಸರಿ. ಕಳೆದ 10 ವರ್ಷಗಳಿಂದ ಕರ್ನಾಟಕದಲ್ಲಿ ನೀರಾವರೆಗೆ ಬಳಸುವ ವಿದ್ಯುತ್ ಪಂಪಸೇಟಗಳಿಗೆ ಉಚಿತ ವಿದ್ಯುತ್ ಸರಬರಾಜು ಇದ್ದರು ಕೂಡಾ ದಿಃ10.02.2017 ರ ನಿಪಿ-31 ದಾಖಲೆ ನಿಮ್ಮ ಹತ್ತಿರ ಹೇಗೆ ಬಂತು ಅಂದರೆ ಕಡಗಂಚಿಯ KEB Office ಗೇ ವಿಚಾರಿಸಿದಾಗ ಬಾವಿಗೆ ಮೋಟಾರ ಪಂಪಸೇಟ ನಮ್ಮ ತಂದೆಯ ಹೆಸರಿನಲ್ಲಿದ್ದು ನಮ್ಮ ತಂದೆಯ ಹೆಸರಿನಲ್ಲಿರುವ ದಾಖಲೆ ಬೇಕು ಎಂದರೆ ಏನು ಮಾಡಬೇಕು ಎಂದು ಕೇಳಿದಾಗ ನೀವು ಹಣ ಕಟ್ಟಿ ನಾವು ದಾಖಲೆ ಕೊಡುತ್ತೇವೆ ಎಂದು ಹೇಳಿದ್ದರಿಂದ 500 ರೂ. ಹಣ ಪಾವತಿ ಮಾಡಿ ಆ ದಾಖಲೆ ತಂದಿರುತ್ತೇನೆ. KEB ರವರು ಅಂದಾಜು 40 ಸಾವಿರ ಚಿಲ್ಲರೆ ಹಣ ಬಾಕಿ ಬಿಲ್ಲ ಇದೆ ಎಂದು ಹೇಳಿದರು. 40 ಸಾವಿರ ಚಿಲ್ಲರೆ ಹಣ ಬಾಕಿ ಇದ್ದು 500 ರೂ. ನೀವು ಹೋಗಿ ಕಟ್ಟಿದ್ದಿರಾ ಎಂದರೆ ನಾನು ವಿಚಾರಿಸಲು ಹೋದಾಗ 40 ಸಾವಿರ ರೂ. ಚಿಲ್ಲರೆ ಹಣ ಬಾಕಿ ಇದೆ ಅಂತ ಹೇಳಿದ್ದು ನಾನು 500 ರೂ. ಕೊಟ್ಟು ರಸೀದಿ ತೆಗೆದುಕೊಂಡು ಬಂದೇನು ಎಂದು ಸಾಕ್ಷಿ ಹೇಳುತ್ತಾರೆ. ನಾನು ನಿಪಿ-30 ನ್ನು ನಾನು KEB ಕಚೇರಿಗೆ ವಿಚಾರಿಸಲು ಹೋದಾಗ ಅವರು ಕೊಟ್ಟಿರುತ್ತಾರೆ. KEB ಬಿಲ್ಲು ಕಟ್ಟುವುದರಿಂದ ವಿನಾಯತಿ ಇದ್ದರು ಕೂಡಾ ಏಕೆ ಹಣ ಕಟ್ಟಿದ್ದರು ಎಂದರೆ ನಾನು ವಿಚಾರಿಸಿದಾಗ ನನ್ನ ತಂದೆಯವರೆ ಹೆಸರಿನಲ್ಲಿ ವಿದ್ಯುತ್ ಬಲ್ಲು ಬ್ಯಾಲನ್ಸ ಇದೆ ಎಂದಾಗ ನಾನು 500 ರೂ. ಕಟ್ಟಿದ್ದೇನೆ ಎಂದು ಹೇಳುತ್ತಾರೆ. ನಮ್ಮ ತಂದೆಯವರು ಬಳಸಿದ ವಿದ್ಯ್ಯ ಚಕ್ತಿ  ಸಂಬಂಧಟ್ಟ ಬಿಲ್ಲು ಎಂದರೆ ಇರಬಹುದು ಎಂದು ಸಾಕ್ಷಿ ಹೇಳುತ್ತಾರೆ.

ಜಮೀನು ಮಾರಾಟ ಆದ ನಂತರ ಮೆಹಬೂಬರವರ ಹೆಸರು ಪಹಣಿಯಲ್ಲಿ ಬಂದಿದೆ ಎಂದರೆ ಸರಿ. ಜಮೀನು ಮಾರಾಟ ಆದ ನಂತರ ಜಮೀನಿನ ಕಂದಾಯವನ್ನು ಮೆಹಬೂಬರವರೆ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಆ ಜಮೀನಿನ ಕಂದಾಯವನ್ನು ಕಟ್ಟಿಲ್ಲ ಎಂದರೆ ಕೇಸು ನಡೆಯುತ್ತಿದ್ದರಿಂದ ಕಟ್ಟಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ದಾವೆ ಬರೆಯಲು ಮಾಹಿತಿ ನಾನು ಮತ್ತು ಲತಿಕಾರವರು ಇಬ್ಬರ ಸೇರಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಮಹಾದೇವ, ಶ್ರೀದೇವಿ ಮತ್ತು ಮೆಹಬೂಬರವರಿಗೆ ನೋಂದಣಿ ದಾಖಲೆ ಮಾಡಿದ ನಂತರ ಯಾವುದೇ ದೂರು ದಾಖಲಾಗಿಲ್ಲ ಎಂದರೆ ನನ್ನ ಗಮನಕ್ಕೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಮೆಹಬೂಬನ ಜಮೀನಿನ ಉತ್ತರಕ್ಕೆ ಕುಪ್ಪಣ್ಣಾ ಮುಲಗೆ, ದಕ್ಷಿಣಕ್ಕೆ ನಮಗೆ ಸೇರಿದ ಸರ್ವೇ ನಂ. 131 ರ ಜಮೀನು ಇದೆ.

ಪೂರ್ವಕ್ಕೆ ಹರೀಶ ಕುಲಕರ್ಣಿರವರ ಜಮೀನು ಮತ್ತು ಪಶ್ಚಿಮಕ್ಕೆ ನಮಗೆ ಸೇರಿದ ಸರ್ವೇ ನಂ. 8 ರ ಜಮೀನು ಇದೆ. ಈಗ ನೋಡುತ್ತಿರುವ ಪೋಟೊದಲ್ಲಿ ಕಂಡುಬರುವ ರಸ್ತೆ ನಮ್ಮ ಜಮೀನು ಸರ್ವೇ ನಂ. 131 ರ ಮಧ್ಯಭಾಗದಲ್ಲಿ ಇದೆ. ಸದರಿ ಪೋಟೋವನ್ನು ನಿಡಿ-3 ಎಂದು ಗುರುತಿಸಲಾಯಿತು. ನಮ್ಮ ತಂದೆ ಹಣಮಂತರಾವರವರು ತಮ್ಮ ಜೀವಿತಾವಧಿಯಲ್ಲಿ ಸರ್ವೇ ನಂ. 7 ಕ್ಕೆ ಹೋಗಬೇಕಾರದೆ ಸರ್ವೆ ನಂ. 131 ರಲ್ಲಿ ಹಾದುಹೋಗುತ್ತಿದ್ದರು. ಸರ್ವೇ ನಂ. 7 ಕ್ಕೆ ಹೋಗಬೇಕಾದರೆ ಈಗ ತೋರಿಸುತ್ತಿರುವ ಪೊಟೊದಲ್ಲಿರುವ ರಸ್ತೆ ಮುಖಾಂತರವೇ ಹೋಗಬೇಕೆಂದರೆ ಸರಕಾರಿ ರಸ್ತೆ ಮುಖಾಂತರ ಸರ್ವೇ ನಂ. 131 ಕ್ಕೆ ಹೋಗಿ ಅದರ ಮುಖಾಂತರ ಸರ್ವೇ ನಂ. 7 ಕ್ಕೆ ಹೋಗುತ್ತೇವೆ. ಸರಕಾರಿ ರಸ್ತೆ ಚಿಂಚೋಳಿ, ನೆಲ್ಲೂರು, ಧನ್ನೂರ ಗ್ರಾಮಕ್ಕೆ ಬಂದು ಅಲ್ಲಿಗೆ ಕೊನೆಯಾಗಿರುತ್ತದೆ. ಮೆಹಬೂಬ ನೆಲ್ಲೂರ ಗ್ರಾಮದವನು ಎಂದರೆ ಸರಿ. ಪಾಂಡುರಂಗರಾವರು ಇದೇ ರಸ್ತೆಯಿಂದ ಬಂದು ಸರ್ವೇ ನಂ. 7 ಕ್ಕೆ ಹೋಗುತ್ತಿದ್ದರು ಎಂದರೆ ಅದೇ ರಸ್ತೆಯಿಂದ ಬಂದು ಸರ್ವೇ ನಂ.131 ರ ಮುಖರಾತರ ಸರ್ವೆ ನಂ. 7 ಕ್ಕೆ ಹೊಗುತ್ತಿದದ್ದರು ಎಂದು ಸಾಕ್ಷಿ ಹೇಳುತ್ತಾರೆ. ಮೆಹಬೂಬರವರು ಅವರ ಜಮೀನಿಗೆ ಹೇಗೆ ಹೋಗುತ್ತಾರೆ ಎಂದರೆ ಅವರು ಜಮೀನಿಗೆ ಹೊಗೆ ಇಲ್ಲ ಕಬ್ಜಾ ನಮ್ಮ ಹತ್ತಿರ ಇದೆ ಎಂದು ಸಾಕ್ಷಿ ಹೇಳುತ್ತಾರೆ.

ಮೆಹಬೂಬರವರು ನನ್ನ ಸೇರಿ 10 ಜನ ವಿರುದ್ಧ ಜಮೀನು ತಂಟೆಗೆ ಬರಬಾರದೆಂದು OS NO. 47/2017 ರಲ್ಲಿ T.I. ಆದೇಶ ಪಡೆದಿದ್ದಾರೆ ಎಂದರೆ ಸರಿ. ಆ 10 ಜನ ಪೈಕಿ 4 ಜನ ಮಾತ್ರ ಮಧ್ಯಂತರ ಆದೇಶದ ವಿರುದ್ಧ ಈ ನ್ಯಾಯಾಲಯದ ವಿರುದ್ಧ ಮೇಲ್ಮನವಿ ಸಸಲ್ಲಿಸಿದ್ದೇವೆ ಎಂದರೆ ನಾವು 4 ಜನ ಮಾತ್ರ ಸ್ಥಳೀಕರಾಗಿದ್ದರಿಂದ ಉಳಿದವರು ಬೆಂಗಳೂರು, ಪೂಣಾ ಮತ್ತು ಲಾತೂರಿನಲ್ಲಿ ಇರುವುದರಿಂದ ನಾವು 4 ಜನ ಸೇರಿ MA 05/2017 ಸಲ್ಲಿಸಿದ್ದೇವೆ ಎಂದು ಹೇಳುತ್ತಾರೆ. ಆ ಅಪೀಲು ಈ ನ್ಯಾಯಾಲಯದಲ್ಲಿ ವಜಾಗೊಂಡು ಅದರ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ರೀಟ್ಟು ಸಲ್ಲಿಸಿದ್ದು ಅದು ವಜಾ ಆಗಿರುತ್ತದೆ ಎಂದರೆ ಸರಿ. ಆ ಜಮೀನಿಗೆ ಹೋಗಬಾರದೆಂದು TI ಆದೇಶ ಇರುವ ವಿಚಾರ ನನಗೆ ಸರಿಯಾಗಿ ಗೊತ್ತಿದೆ ಎಂದರೆ ಸರಿ. ಮಾನ್ಯ ಉಚ್ಚನ್ಯಾಯಾಲಯದವರೆಗೂ TI ಆದೇಶ ಖಾಯಂ ಆಗಿದ್ದರೂ ಕೂಡಾ ಕಳೆದ 4 ದಿನಗಳಿಂದ ನಾನು ಮೆಹಬೂಬರವರಿಗೆ ಜಮೀನಿನಲ್ಲಿ ಬಿತ್ತನೆ ಮಾಡಲು ಬಿಡುತ್ತಿಲ್ಲ ಎಂದರೆ ಸರ್ವೇ ನಂ. 131 ರಲ್ಲಿ ನಾನು ಹಾಯ್ದುಹೋಗಲು ಬಿಡದಿದ್ದರೆ ಆತ ಸರ್ವೇ ನಂ. 7 ರಲ್ಲಿ ಹೇಗೆ ಹೋಗಿ ಬಿತ್ತನೆ ಮಾಡುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ನಿಡಿ-3 ರಲ್ಲಿ ಪೋಟೊದಲ್ಲಿರುವ ಟಾರ ರಸ್ತೆ ಸರ್ವೇ ನಂ. 7 ರ ಮುಖಾಂತರ ಹೋಗಿದೆ ಎಂದರೆ ಸರಿಯಲ್ಲ. ರವಿವಾರ ದಿನ ಮೆಹಬೂರವರು ಬಿತ್ತನೆ ಮಾಡಲು ಬೇರೆಯವರ ಜಮೀನು ಮುಖಾಂತರ ಹೋಗಲು ಪ್ರಯತ್ನಿಸಿದ್ದರಿಂದ ಪೋಲಿಸರನ್ನು ಕರೆದುಕೊಂಡು ಬಂದು ಜಮೀನು ಬಿತ್ತನೆ ಮಾಡಲು ಬಿಟ್ಟಿಲ್ಲ ಎಂದರೆ ಸರಿಯಲ್ಲ. ನಾವು 50 ಜನರನ್ನು ಕರೆದುಕೊಂಡು ಹೋಗಿ ಮೆಹಬೂಬರವರ ಮೇಲೆ ಗಲಾಟೆ

ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಮೆಹಬೂಬರರಿಗೆ ಹೆಲಿಕಾಪ್ಟರ ಮುಖಾಂತರ ಬಿತ್ತನೆ ಮಾಡಲು ಸಹ ಬಿಡುವುದಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ.

**( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದರಿಂದ ಮುಂದೂಡಲಾಗಿದೆ)**

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಆಳಂದ